



# ಯೂಟ್ಯೂಬ್; ಹೊಸ ಎಐ ಟೂಲ್

ಎಐ ಓಘದಲ್ಲಿ ತಾನು ಹೇಗೆ ಹಿಂದುಳಿಯಲಿ ಎನ್ನುವಂತಿದೆ ಯೂಟ್ಯೂಬ್ ಈಚೆಗೆ ಪರಿಚಯಿಸಿರುವ ಹೊಸ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧರಿತ ಟೂಲ್! ಕೆಲವೇ ಸೆಕೆಂಡುಗಳಲ್ಲಿ ಸಣ್ಣ ಮಟ್ಟದ ಯೂಟ್ಯೂಬ್ ಶಾರ್ಟ್ಸ್ ವಿಡಿಯೊ ಸೃಷ್ಟಿಸಬಹುದು.

■ ಶಶಿಕುಮಾರ್ ಸಿ.

ಕಂಟೆಂಟ್ ಕ್ರಿಯೇಟರ್‌ಗಳಿಗೆ ಯೂಟ್ಯೂಬ್ ಈಚೆಗೆ ಎಐ ಬ್ರಹ್ಮಾಸ್ತ್ರ ಪರಿಚಯಿಸಿದೆ. ಎಐನ ಕ್ರಾಂತಿಕಾರಿ ಬೆಳವಣಿಗೆಯ ಈ ಹೊತ್ತಿನಲ್ಲಿ ಯೂಟ್ಯೂಬ್‌ನ ಈ ಹೊಸ ಅಸ್ತ್ರವು ಬೆರಳೆಣಿಕೆಯ ನಿಮಿಷಗಳಲ್ಲೇ ವಿಡಿಯೊ ರಚಿಸಿಕೊಡಲಿದ್ದು, ಇದನ್ನು ಬಳಸಿಕೊಂಡು ‘ಶಾರ್ಟ್ಸ್’ನಲ್ಲಿ ಹೊಸ ಅಲೆ ಸೃಷ್ಟಿಸಬಹುದಾಗಿದೆ. ಸಣ್ಣ ಮಟ್ಟದಲ್ಲಿ ಕಂಟೆಂಟ್ ಕ್ರಿಯೇಟ್ ಮಾಡುವ ಯೂಟ್ಯೂಬರ್‌ಗಳಿಗಂತೂ ಇದು ದಸರಾ ಧಮಾಕದಂತಿದೆ.

ಯೂಟ್ಯೂಬ್‌ನ ಈ ಹೊಸ ಅಸ್ತ್ರದ ಹೆಸರು ‘ವಿಇಒ 3 ಫಾಸ್ಟ್’ (Veo 3 Fast). ಗೂಗಲ್ ಡೀಪ್‌ಮೈಂಡ್ ಜೊತೆಗಿನ ಪಾಲುದಾರಿಕೆಯಲ್ಲಿ ಈ ಹೊಸ ವಿಡಿಯೊ ಜನರೇಷನ್ ಮಾಡೆಲ್ ಅನ್ನು ಈಚೆಗೆ ಯೂಟ್ಯೂಬ್ ಪರಿಚಯಿಸಿದೆ. ಈ ಬಗ್ಗೆ ಯೂಟ್ಯೂಬ್ ತನ್ನ ಬ್ಲಾಗ್‌ನಲ್ಲಿ ಪೋಸ್ಟ್ ಮಾಡಿದೆ. ಶಾರ್ಟ್ಸ್ ವಿಡಿಯೊ ಕ್ರಿಯೇಟರ್‌ಗಳಿಗೆ ಯೂಟ್ಯೂಬ್ ಈ ಅಪ್‌ಡೇಟ್ ಒದಗಿಸಿದ್ದು, ‘ಮೇಡ್ ಆನ್ ಯೂಟ್ಯೂಬ್’ ಕಾರ್ಯಕ್ರಮದಲ್ಲಿ.

ಜಗತ್ತಿನಾದ್ಯಂತ ಸಕ್ರಿಯವಾಗಿರುವ ಯೂಟ್ಯೂಬ್ ಕಂಟೆಂಟ್ ಕ್ರಿಯೇಟರ್ಸ್‌ಗೆ ಉಪಯುಕ್ತವಾಗಿರುವ ಈ ಗೇಮ್ ಚೇಂಜಿಂಗ್ ಫೀಚರ್, ಕೆಲವೇ ಸೆಕೆಂಡುಗಳಲ್ಲಿ ನೀವು ಊಹಿಸದಂತಹ ವಿಡಿಯೊ ಒದಗಿಸಲಿದೆ. ಇದನ್ನು ಯೂಟ್ಯೂಬ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬಹುದಾಗಿದೆ. ಈ ಫೀಚರ್‌ನ ಸಹಾಯದಿಂದ ಇನ್ನಷ್ಟು ಸುಲಭವಾಗಿ ವಿಡಿಯೊಗಳನ್ನು ಪರಿಣಾಮಕಾರಿಯಾಗಿ ಹಾಗೂ ಸೃಜನಾತ್ಮಕವಾಗಿ ರಚಿಸಬಹುದು.

### ಹೊಸ ಟೂಲ್ ಹಿಂದಿನ ಉದ್ದೇಶ

ಯೂಟ್ಯೂಬ್ ಒಂದು ಜಾಗತಿಕ ಮಾಧ್ಯಮವಾಗಿ ಜಗತ್ತಿನಾದ್ಯಂತ ಹರಡಿದೆ. ಅದೆಷ್ಟೋ ಕೋಟ್ಯಂತರ ಮಂದಿ ನಿತ್ಯವೂ ವಿಡಿಯೊಗಳನ್ನು ರಚಿಸಿ ಈ ವೇದಿಕೆಯಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಇದರ ಜೊತೆಗೆ ಪ್ರತಿಸ್ಪರ್ಧಿ ಕಂಪನಿಗಳೆಲ್ಲವೂ ಜನರೇಟಿವ್ ವಿಡಿಯೊ ಮಾಡೆಲ್ ಪರಿಚಯಿಸಿ, ಒಂದು ಹೆಜ್ಜೆ ಮುಂದಿದ್ದಾರೆ. ಈ ಓಟವು ಯೂಟ್ಯೂಬ್‌ನ ಸಕ್ರಿಯ ಕಂಟೆಂಟ್ ಕ್ರಿಯೇಟರ್ಸ್ ಬೇರೆ ಕಂಪನಿಗಳತ್ತ ಮುಖಮಾಡುವ ಸಾಧ್ಯತೆ ಇದೆ.

ಈ ಕಾರಣಕ್ಕೆ ಜಗತ್ತಿನಾದ್ಯಂತ ಇರುವ ತನ್ನ ಅಸಂಖ್ಯ ಕಂಟೆಂಟ್ ಕ್ರಿಯೇಟರ್ಸ್‌ಗೆ ಅನುಕೂಲವಾಗಲೆಂದು ಈ ಹೊಸ ಟೂಲ್ ಅಪ್‌ಡೇಟ್ ಮಾಡಿದೆ. ಇದನ್ನು ವಿಶೇಷವಾಗಿ ಯೂಟ್ಯೂಬ್‌ನ ಭಾಗವಾದ ‘ಶಾರ್ಟ್ಸ್’ಗೆಂದೇ ರೂಪಿಸಲಾಗಿದೆ. ಈ ಟೂಲ್ ಬಳಕೆದಾರರಿಗೆ 480ಪಿ ಕ್ವಾಲಿಟಿ ವಿತ್ ಸೌಂಡ್ ವಿಡಿಯೊ ಕ್ಲಿಪ್‌ಗಳನ್ನು ರಚಿಸಲು ಸಹಾಯ ಮಾಡುತ್ತದೆ.

### ವಿಡಿಯೊ ರಚಿಸುವುದು ಹೇಗೆ?

ಯೂಟ್ಯೂಬ್‌ನಲ್ಲಿ ‘ವಿಇಒ 3 ಫಾಸ್ಟ್’ ಬಳಸಿಕೊಂಡು ಸುಲಭವಾಗಿ ವಿಡಿಯೊ ಜನರೇಟ್ ಮಾಡಬಹುದು. ಅದಕ್ಕಾಗಿ ಒಂದು ಧ್ಯೇಯ ಅಥವಾ ಒಂದು ಕಲ್ಪನೆಯನ್ನು ಕಂಟೆಂಟ್ ಕ್ರಿಯೇಟರ್ಸ್ ಸೃಜಿಸಿಕೊಳ್ಳುವುದು ಅತ್ಯವಶ್ಯ. ಜೊತೆಗೆ ಅದಕ್ಕೆ ತಕ್ಕಂತಹ ಕ್ರಮಬದ್ಧ ಪ್ರಾಂಪ್ಟ್ ರಚಿಸುವ ನೈಪುಣ್ಯತೆ ಹೊಂದಿರಬೇಕು. ಮೊದಲು ಕಲ್ಪನೆಗೆ ತಕ್ಕಂತಹ ವಿಡಿಯೊಗೆ ಪ್ರಾಂಪ್ಟ್ ಒದಗಿಸಿದರೆ ಕೆಲವೇ ಸೆಕೆಂಡುಗಳಲ್ಲಿ ವಿಡಿಯೊ ನಿಮ್ಮ ಮುಂದೆ ತೆರೆದುಕೊಳ್ಳುತ್ತದೆ. ನಿಮ್ಮ ಯಾವುದೇ ಆಲೋಚನೆಗಳಿಗೆ ಅನುಗುಣವಾದ ಯೂಟ್ಯೂಬ್ ಶಾರ್ಟ್ಸ್ ವಿಡಿಯೊಗಳನ್ನು ಕ್ರಿಯೇಟ್ ಮಾಡುವ ಸಾಮರ್ಥ್ಯವನ್ನೂ ಇದು ಹೊಂದಿದೆ. ■




### ಸ್ಪೀಚ್ ಟು ಸಾಂಗ್ ಫೀಚರ್

ಯೂಟ್ಯೂಬ್ ‘ಸ್ಪೀಚ್ ಟು ಸಾಂಗ್’ ಎಂಬ ಮತ್ತೊಂದು ಫೀಚರ್ ಪರಿಚಯಿಸಿದೆ. ಇದು ಯಾವುದೇ ಡೈಲಾಗ್ ಅನ್ನು ಮ್ಯೂಸಿಕಲ್ ಸೌಂಡ್ ಟ್ರ್ಯಾಕ್‌ಗೆ ಸುಲಭವಾಗಿ ಪರಿವರ್ತಿಸುತ್ತದೆ. ಗೂಗಲ್‌ನ ಡೀಪ್‌ಮೈಂಡ್ ಲೈರಿಯಾ 2 (Google DeepMind Lyria 2) ಮಾದರಿಯ ಭಾಗವಾಗಿದೆ. ಯಾವುದೇ ರೀತಿಯ ಟೆಕ್ಸ್ಟ್ ಅನ್ನು ಇದು ಡ್ಯಾನ್ಸ್ ಬಲ್ ಅಥವಾ ಫನ್ ಟ್ರ್ಯಾಕ್ ಆಗಿ ಬದಲಿಸುತ್ತದೆ.

### ‘ಎಡಿಟ್ ವಿತ್ ಎಐ’ ಬಳಸಿ

ವಿಡಿಯೊ ಎಡಿಟಿಂಗ್ ಅನ್ನೂ ಅತ್ಯಂತ ಸಲೀಸಾಗಿ ಈ ಟೂಲ್ ಮಾಡುತ್ತದೆ. ಯೂಟ್ಯೂಬ್ ಈಗ ಎಐ ಬಳಸಿಕೊಂಡು ನಿಮ್ಮ ಫೋಟೊಗಳು ಮತ್ತು ಕ್ಲಿಪ್‌ಗಳನ್ನು ತಮಾಷೆಯ, ಹೆಚ್ಚು ಆಕರ್ಷಕವಾದ ಆಡಿಯೊ ಎನೇಬಲ್ಡ್ ವಿಡಿಯೊ ಆಗಿ ಪರಿವರ್ತಿಸುತ್ತದೆ. ಇದಕ್ಕಾಗಿ ಎಡಿಟ್ ವಿಥ್ ಎಐ (Edit with AI) ಪರಿಚಯಿಸಿರುವ ಯೂಟ್ಯೂಬ್, ಇದನ್ನು ಅಮೆರಿಕ, ಯುಕೆ, ಕೆನಡಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್‌ನಲ್ಲಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಿದೆ. ಶೀಘ್ರ ಭಾರತಕ್ಕೂ ಕಾಲಿಡಲಿದೆ. ಈ ವೈಶಿಷ್ಟ್ಯವು ಎಡಿಟ್ ವಿಧಾನವನ್ನು ಸರಳಗೊಳಿಸಲಿದೆ. ಇದು ನಿಮ್ಮ ಕ್ಯಾಮೆರಾ ರೋಲ್‌ನಿಂದ ಅತ್ಯುತ್ತಮ ಕ್ಷಣಗಳನ್ನು ಆಟೊಮೆಟಿಕ್ ಆಗಿ ಸೆಲೆಕ್ಟ್ ಮಾಡಿ ಹಾಸ್ಯಮಯ ವಿಡಿಯೊವಾಗಿ ಪರಿವರ್ತಿಸುವ ಚಾಕಚಕ್ಯತೆಯನ್ನು ಹೊಂದಿದೆ. ಇದು ಮ್ಯೂಸಿಕ್, ಟ್ರಾನ್ಸಿಷನ್ಸ್, ಹಿಂದಿ ಅಥವಾ ಇಂಗ್ಲಿಷ್ ವಾಯ್ಸ್‌ಓವರ್‌ನೊಂದಿಗೆ ತಮಾಷೆಯ ವಿಡಿಯೊ ಡ್ರಾಫ್ಟ್ ರಚಿಸುತ್ತದೆ. ಇದರ ಜೊತೆಗೆ ಮೋಷನ್ ಟ್ರಾನ್ಸ್‌ಫರ್, ಸ್ಟೈಲ್ ಟ್ರಾನ್ಸ್‌ಫಾರ್ಮ್ ಮತ್ತು ಆಬ್ಜೆಕ್ಟ್ ಆ್ಯಡ್‌ನಂತಹ ಫೀಚರ್‌ಗಳೂ ಈ ಟೂಲ್ ಪಟ್ಟಿಗೆ ಸೇರಲಿವೆ.